# ಶ್ರೀ ಚಿದಾನಂದ ಎಂ.ಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಉತ್ತರ

## ಸೂಚನೆ:-

ಕರ್ನಾಟಕ ರಾಜ್ಯದಲ್ಲಿ ಕಡಲತೀರ ಮತ್ತು ನದಿ ಬಯಲಿನ ಪ್ರದೇಶಗಳನ್ನು ಹೊರತುಪಡಿಸಿ ಚೆಕ್ ಡ್ಯಾಂ, ಕೆರೆ ಮತ್ತು ಕುಂಟೆಗಳಲ್ಲಿ ಮೀನುಗಾರಿಕೆ ಇಲಾಖೆಯ ಅಧೀನದಲ್ಲಿ ನಡೆಯುವ ಮೀನುಗಾರಿಕೆ ಹಾಗೂ ಗ್ರಾಮೀಣ ಭಾಗಗಳಲ್ಲಿನ ಕೆರೆಗಳಲ್ಲಿನ ಮೀನುಗಳನ್ನು ಹಿಡಿಯಲು ಗುತ್ತಿಗೆ ಪದ್ಧತಿಯಿದ್ದು, ಹಲವು ದಶಕಗಳಿಂದ ಕೆಲವೇ ಗುತ್ತಿಗೆದಾರರು ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸರ್ಕಾರಕ್ಕೂ ನಷ್ಟವನ್ನುಂಟು ಮಾಡಿ ಕೆರೆಯ ವ್ಯಾಪ್ತಿಯ ಗ್ರಾಮಸ್ಥರಿಗೂ ಮಾಹಿತಿ ನೀಡದ ಗುತ್ತಿಗೆಯನ್ನು ನೀಡುತ್ತಿರುವುದರಿಂದ ಕೆರೆ ವ್ಯಾಪ್ತಿಗೆ ಬರುವ ಗ್ರಾಮಸ್ಥರಿಗೂ ಕೆರೆಯ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅವಕಾಶ ನೀಡದೇ ಇರುವುದು ಹಾಗೂ ಕೆಲವೇ ಗುತ್ತಿಗೆದಾರರಿಗೆ ಶಾಶ್ವತವಾಗಿ ಗುತ್ತಿಗೆಯನ್ನು ಕೊಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕಾಗುತ್ತಿರುವ ನಷ್ಟದ ಕುರಿತು.

## ಹೇಳಿಕೆ:-

ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆ ವ್ಯಾಪ್ತಿಯಡಿ 3906 ಕೆರೆಗಳು ಹಾಗೂ 83 ಜಲಾಶಯಗಳಿದ್ದು, ಈ ಪೈಕಿ 3329 ಕೆರೆಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ / ಟೆಂಡರ್-ಕಂ-ಹರಾಜು ಮೂಲಕ ವಿಲೇ ಮಾಡಲಾಗಿದೆ. ಮುಂದುವರೆದು, ರಾಜ್ಯದಲ್ಲಿರುವ 83 ಜಲಾಶಯಗಳ ಪೈಕಿ 19 ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮೂಲಕ ಅರ್ಹ ಮೀನುಗಾರರ ಸಹಕಾರ ಸಂಘಗಳಿಗೆ, 15 ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ ಹಾಗೂ 39 ಜಲಾಶಯಗಳ ಮೀನು ಪಾಶುವಾರು ಹಕ್ಕನ್ನು ಸ್ಥಳೀಯ ಮೀನುಗಾರರಿಗೆ ಪರವಾನಗಿ ಮೂಲಕ ವಿಲೇ ಮಾಡಲಾಗಿದೆ. ಉಳಿದ 10 ಜಲಾಶಯಗಳಲ್ಲಿ ವಿದ್ಯುತ್ ಉತ್ಪಾದನೆ ಘಟಕಗಳ ಸುರಕ್ಷತೆ ಹಾಗೂ ಇನ್ನಿತರ ಕಾರಣಗಳಿಂದ ವಿಲೇ ಮಾಡುತ್ತಿರುವುದಿಲ್ಲ. ಚೆಕ್ ಡ್ಯಾಂಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಮೀನುಗಾರಿಕೆ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಜಲಸಂಪನ್ಮೂಲಗಳನ್ನು ಗುತ್ತಿಗೆ/ಟೆಂಡರ್‌ನಲ್ಲಿ ಪಡೆದುಕೊಂಡ ಗುತ್ತಿಗೆ / ಟೆಂಡರ್‌ದಾರರು ಮೀನುಮರಿಗಳನ್ನು ಬಿತ್ತನೆ ಮಾಡಿ ಮೀನು ಸಾಕಾಣಿಕೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. 2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಒಳನಾಡು ಜಲ ಸಂಪನ್ಮೂಲಗಳಿಂದ ಸುಮಾರು 2.51 ಲಕ್ಷ ಟನ್‌ಗಳಷ್ಟು ಮೀನು ಉತ್ಪಾದನೆಯಾಗಿರುತ್ತದೆ.

40 ಹೆಕ್ಟೇರ್‌ಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಮೀನುಗಾರಿಕೆ ಇಲಾಖೆ ವ್ಯಾಪ್ತಿಗೆ ಹಾಗೂ 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಹೊಂದಿರುವ ಕೆರೆಗಳ (ಪಟ್ಟಣ ಪಂಚಾಯಿತಿ/ ಪುರಸಭೆ/ ನಗರ ಸಭೆ/ ಮಹಾನಗರ ಪಾಲಿಕೆ / ಬಿ.ಬಿ.ಎಂ.ಪಿ. ವ್ಯಾಪ್ತಿ ಹೊರತುಪಡಿಸಿ) ಮೀನು ಪಾಶುವಾರು ಹಕ್ಕಿನ ವಿಲೇವಾರಿಯು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಒಳಪಟ್ಟಿರುತ್ತದೆ. ಇದಲ್ಲದೆ, ರಾಜ್ಯದಲ್ಲಿರುವ 83 ಜಲಾಶಯ ಹಾಗೂ ಸುಮಾರು 5853 ಕಿ.ಮೀ. ನದಿ ಭಾಗದಲ್ಲಿನ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಸಹ ಮೀನುಗಾರಿಕೆ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅರ್ಹ ಮೀನುಗಾರರ ಸಹಕಾರ ಸಂಘಗಳು ನೇರ ಗುತ್ತಿಗೆ ಮುಖಾಂತರ ಇಲಾಖಾ ವ್ಯಾಪ್ತಿಯ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014 ರನ್ವಯ ಗುತ್ತಿಗೆ ಮೊತ್ತ ಪಾವತಿಸಿ, 5 ವರ್ಷಗಳ ಅವಧಿಗೆ ಗುತ್ತಿಗೆಗೆ ಪಡೆದುಕೊಳ್ಳಲು ಅವಕಾಶವಿರುತ್ತದೆ. ಗುತ್ತಿಗೆಗೆ ವಿಲೇವಾರಿ ಮಾಡಲಾದ ನಂತರ ಬಾಕಿ ಉಳಿಯುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡಲಾಗುತ್ತಿದೆ. ಈ ನೀತಿಯನುಸಾರ ವಿಲೇವಾರಿ ಪ್ರಕ್ರಿಯೆಯನ್ನು ಪೂರ್ಣ ಪಾರದರ್ಶಕವಾಗಿ ನಡೆಯಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಜಾರಿಯಲ್ಲಿಡಲಾಗಿದೆ. ವಿಲೇವಾರಿ ಮಾಡಲಾಗುವ ಜಲಸಂಪನ್ಮೂಲಗಳ ವಿವರ, ಜಲವಿಸ್ತೀರ್ಣ, ಹರಾಜು ನಡೆಸುವ ಸ್ಥಳ, ದಿನಾಂಕ ಇತ್ಯಾದಿಗಳ ವಿವರಗಳನ್ನೊಳಗೊಂಡಂತೆ ಪತ್ರಿಕಾ ಪ್ರಕಟಣೆ ಹೊರಡಿಸಿ, ಪ್ರಕಟಣೆಯ ಪ್ರತಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿ ಕಾರ್ಯಾಲಯ, ಜಲಸಂಪನ್ಮೂಲಗಳ ಗ್ರಾಮ, ತಹಶೀಲ್ದಾರ್ ರವರ ಕಛೇರಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ ಮತ್ತು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿ ಕಛೇರಿಯ ಜಾಹಿರಾತು ಫಲಕಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅಲ್ಲದೇ, ಕೆರೆ ವ್ಯಾಪ್ತಿಯ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ವ್ಯಾಪಕವಾಗಿ ಹರಾಜು ಇಸ್ತಿಹಾರ್‌ಗಳನ್ನು ಹಂಚುವ ಮೂಲಕ ವ್ಯಾಪಕ ಪ್ರಚಾರ ಮಾಡಲಾಗುತ್ತಿದೆ. ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಆದಾಯ ಕ್ರೋಢಿಕರಿಸುವ ಸಲುವಾಗಿ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಟೆಂಡರ್-ಕಂ-ಹರಾಜು ಮೂಲಕ 5 ವರ್ಷಗಳ ಅವಧಿಗೆ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ವಿಲೇ ಮಾಡಲಾಗುತ್ತಿದೆ. ಸದರಿ ಪ್ರಕ್ರಿಯೆಯಲ್ಲಿ ಆಸಕ್ತ ಬಿಡ್‌ದಾರರು ಬಿಡ್ ಮೊತ್ತವನ್ನು ನಮೂದಿಸಿ ನಗದು ಹುಂಡಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಸಲ್ಲಿಸ ಬೇಕಾಗಿರುತ್ತದೆ. ಟೆಂಡರ್-ಕಂ-ಹರಾಜು ದಿನದಂದು ಮೊದಲು ಹರಾಜು ನಡೆಸಿ, ತದನಂತರ ಟೆಂಡರ್ ತೆರೆಯಲಾಗುವುದು. ಇವುಗಳ ಪೈಕಿ ಅತೀ ಹೆಚ್ಚಿನ ಮೊತ್ತ ಬಿಡ್ ಮಾಡಿರುವವರನ್ನು ಯಶಸ್ವಿ ಬಿಡ್‌ದಾರರೆಂದು ಹಾಗೂ ಅತೀ ಹೆಚ್ಚಿನ ಮೊತ್ತ ನಮೂದು/ಬಿಡ್ ಮಾಡಿರುವುದನ್ನು ಮೊದಲನೇ ವರ್ಷದ ಬಿಡ್

ಮೊತ್ತವೆಂದು ಪರಿಗಣಿಸಲಾಗುವುದು. ಉಳಿದ 4 ವರ್ಷಗಳ ಅವಧಿಗೆ ಪ್ರತಿವರ್ಷ ಹಿಂದಿನ ವರ್ಷದ ಬಿಡ್ ಮೊತ್ತಕ್ಕೆ ಶೇ.5 ರಷ್ಟು ಹೆಚ್ಚಿಸಿ ಬಿಡ್ ಮೊತ್ತ ನಿಗದಿಪಡಿಸಿ 5 ವರ್ಷಗಳ ಅವಧಿಗೆ ವಿಲೇ ಮಾಡಿರುವುದನ್ನು ಸಕ್ಷಮ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರದನ್ವಯ ದೃಢೀಕರಿಸಿ, ದೃಢೀಕರಣ ಆದೇಶ ನೀಡಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 22624 ಕೆರೆಗಳಿದ್ದು, 1.25 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಹೊಂದಿದ್ದು ಮೀನು ಉತ್ಪಾದನೆಗೆ ವಿಪುಲ ಅವಕಾಶವಿರುತ್ತದೆ. ಗ್ರಾಮ ಪಂಚಾಯಿತಿಗಳಿಗೆ ಆದಾಯ ತರುವ ದೃಷ್ಟಿಯಿಂದ ಮತ್ತು ಗ್ರಾಮ ಪಂಚಾಯಿತಿಗಳನ್ನು ಬಲಪಡಿಸುವ ಉದ್ದೇಶದಿಂದ 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕಿಂತ ಕಡಿಮೆ ಇರುವ ಕೆರೆಗಳನ್ನು ಸರ್ಕಾರದಿಂದ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ. ಅಲ್ಲದೆ, ಗ್ರಾಮೀಣ ಭಾಗದ ಮೀನುಗಾರರು ಹಾಗೂ ಸ್ಥಳೀಯ ಯುವಕರಿಗೆ ಸ್ವಉದ್ಯೋಗ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಅವಕಾಶವಿರುತ್ತದೆ. 40 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶದವರೆಗಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿಯನ್ನು ಆಯಾ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿರುತ್ತದೆ.

---

ಸಂಖ್ಯೆ: ಪಸಂಮೀ ಇ-106 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು